ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಸಿಂದಗಿ

ಕ್ರಿಮಿನಲ್ ಕೇಸ್ ನಂ.100/2020

ಸಿ.ಡಬ್ಲೂ:3 ಪಿ.ಡಬ್ಲೂ:1

ಸಾಕ್ಷಿಗೆ ದಿನಾಂಕ 16/05/2024 ರಂದು ಪ್ರಮಾಣಿಕರಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | ಅಶೋಕ |
| ತಂ/ಗಂ. ಹೆಸರು | ಶಂಕರ ಚವಾಣ |
| ವಯಸ್ಸು | 32 ವರ್ಷ |
| ಉದ್ಯೋಗ | ಆಟೋ ಚಾಲಕ |
| ವಾಸಸ್ಥಳ | ದೇವರ ಹಿಪ್ಪರಗಿ |

**ಮುಖ್ಯ ವಿಚಾರಣೆ ಃ ಶ್ರೀ ಎಪಿಪಿ ಯವರಿಂದ**

ಸುಮಾರು 5 ವರ್ಷಗಳ ಹಿಂದೆ ನಾನು ದೇವರ ಹಿಪ್ಪರಗಿ ಬಸ್ ನಿಲ್ದಾಣದಲ್ಲಿದ್ದಾಗ ಪೋಲಿಸರು ಒಂದು ದಾಖಲೆಯ ಮೇಲೆ ನನ್ನ ಸಹಿ ಪಡೆದಿರುತ್ತಾರೆ. ಯಾವ ಕಾರಣಕ್ಕಾಗಿ ಸಹಿ ಪಡೆದರು ಎಂದು ನನಗೆ ಗೊತ್ತಿಲ್ಲ. ಸದರಿ ದಾಖಲೆಯು ಜಪ್ತುಪಂಚನಾಮೆಯಾಗಿದ್ದು ಅದರಲ್ಲಿ ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿ.ಪಿ. 1 ಎಂದು, ಸಾಕ್ಷಿಯು ಸಹಿಯನ್ನು ನಿ.ಪಿ. 1 ಎ ಎಂದು ಗುರುತಿಸಲಾಯಿತು. ಆರೋಪಿತರು ಗೊತ್ತಿಲ್ಲ. ಪೋಲಿಸರು ನನ್ನ ಸಮಕ್ಷಮ ಪಂಚನಾಮೆ ಮಾಡಿರುವುದಿಲ್ಲ. ಯಾವುದೇ ವಸ್ತುಗಳನ್ನು ಜಪ್ತುಪಡಿಸಿಕೊಂಡಿರುವುದಿಲ್ಲ. ನಿ.ಪಿ. 1 ರಲ್ಲಿ ಬರೆದಿರುವ ವಿಷಯ ಗೊತ್ತಿಲ್ಲ.

( ಈ ಹಂತದಲ್ಲಿ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅದಕ್ಕೆ ಆರೋಪಿ ಪರ ವಕೀಲರು ಯಾವುದೇ ತಕರಾರು ವ್ಯಕ್ತಪಡಿಸದ ಕಾರಣ ಮತ್ತು ಸಾಕ್ಷಿಯು ಪ್ರತ್ಯೇಕ್ಷ ಸಾಕ್ಷಿಯಾಗಿದ್ದು ಸಂಪೂರ್ಣವಾಗಿ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿದ್ದರಿಂದ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

ಪಾಟೀ ಸವಾಲು ಃ ಎ.ಪಿ.ಪಿ. ಯವರಿಂದ

ದಿನಾಂಕ 08-09-2019 ರಂದು ಮದ್ಯಾಹ್ನ 12.15 ಗಂಟೆಗೆ ನಮ್ಮನ್ನು ಪೋಲಿಸ್ ಸಿಬ್ಬಂದಿ ಚಾ ಸಾ 5 ರವರು ಕರೆದುಕೊಂಡು ದೇವರ ಹಿಪ್ಪರಗಿ ಟಿಪ್ಪು ಸುಲ್ತಾನ ಸರ್ಕಲ ಹತ್ತಿರ ಬಂದಿದ್ದುನಂತರ ನಮಗೆ ವಿಜಯಪೂರ ಎನ್ ಎಚ್ ರಸ್ತೆ ಮೇಲೆ ದಾಬಾದ ಹತ್ತಿರ ಅಕ್ರಮವಾಗಿ ಸಾರಾಯಿ ಮಾರಾಟ ಮಾಡುತ್ತಿದ್ದಾರೆ ಎಂದು

ಮಾಹಿತಿ ಬಂದಿದ್ದು ಕಾರಣ ಪಂಚರಾಗಲು ವಿನಂತಿಸಿಕೊಂಡಿದ್ದರಿಂದ ಒಪ್ಪಿಕೊಂಡು ಸ್ಥಳಕ್ಕೆ ಪೋಲಿಸರ ವಾಹನ ಮೂಲಕ ಹೋಗಿ ಅಲ್ಲಿ ಸಾರಾಯಿ ಮಾರಾಟ ಮಾಡುತ್ತಿದ್ದ ಯಮನಪ್ಪ ತಂದೆ ಬೊಜಪ್ಪ ಮೇಗಾರ ಇತನನ್ನು ವಶಕ್ಕೆ ಪಡೆದು ಸಾರಾಯಿ ಕುಡಿಯಲು ಕುಳಿತಿದ್ದ ಒಬ್ಬ ಯಲ್ಲಪ್ಪ ಬೊವಿ ಇವರನ್ನು ವಶಕ್ಕೆ ಪಡೆದು ನಂತರ ಅಲ್ಲಿಂದ 180 ಎಮ್ ಎಲ್ 14 ಮದ್ಯ ತುಂಬಿ ಬ್ಯಾಗ ಪೈಪರ ವಿಸ್ಕಿ, 500 ಎಮ್ ಎಲ್ 21 ಕಿಂಗ ಪೀಶರ ಸ್ಟ್ರಾಂಗ ಪ್ರಿಮಿಯಮ್ ಬೀರ, 2 ಬ್ಯಾಗ ಪೈಪರ ವಿಸ್ಕಿ , ಎರಡು ಖಾಲಿ ಪ್ಲಾಸ್ಟಿಕ ಗ್ಲಾಸ ಮತ್ತು ಆತನ ಕಡೆಯಿಂದ ಒಂದು ಮೊಬೈಲ ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಮದ್ಯಾಹ್ನ 1.10 ರಿಂದ 2.10 ರವರೆಗೆ ಪಂಚನಾಮೆ ಮಾಡಿ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಃ</u> ಆರೋಪಿತರ ಪರ ವಕೀಲರು ತಮ್ಮ ಪರ ಪಾಟೀ ಸವಾಲು ಇರುವುದಿಲ್ಲವೆಂದು ಹೇಳಿರುತ್ತಾರೆ.

ಮರು ವಿಚಾರಣೆ ಃ ಇಲ್ಲಾ

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಸಿಂದಗಿ